ॐ

॥ ಶ್ರೀ ವೀತರಾಗಾಯ ನಮಃ ॥

# ಆನೆಕೆರೆ 'ಚತುರ್ಮುಖ ಕೆರೆಬಸದಿ' ಜೀರ್ಣೋದ್ಧಾರ ಸಮಿತಿ (ರಿ.) ಕಾರ್ಕಳ

ಆನೆಕೆರೆ, ಅಂಚೆ : ಕಾರ್ಕಳ, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ, 574104.


## ಮನವಿ ಪತ್ರ



ರಾಜಗುರು ಧ್ಯಾನಯೋಗಿ
ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ
ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ
ಜೈನ ಮಠ, ದಾನಶಾಲೆ, ಕಾರ್ಕಳ



ಪ.ಪೂ 108 ಮುನಿಶ್ರೀ
ಅಮೋಘ ಕೀರ್ತಿ ಮಹಾರಾಜ್



ಪ.ಪೂ 108 ಮುನಿಶ್ರೀ
ಅಮರ ಕೀರ್ತಿ ಮಹಾರಾಜ್



ಪದ್ಮವಿಭೂಷಣ
ರಾಜರ್ಷಿ ಡಾ। ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ



॥ ಭ। ಶ್ರೀ ಆದಿನಾಥಾಯ ನಮಃ ॥ ॥ ಭ। ಶ್ರೀ ಚಂದ್ರನಾಥಾಯ ನಮಃ ॥

॥ ಭ। ಶ್ರೀ ಶಾಂತಿನಾಥಾಯ ನಮಃ ॥ ॥ ಭ। ಶ್ರೀ ವರ್ಧಮಾನಾಯ ನಮಃ ॥

॥ ಭ। ಶ್ರೀ ಪಾರ್ಶ್ವನಾಥಾಯ ನಮಃ ॥

॥ ಮಹಾಮಾತೆ ಶ್ರೀ ಚಕ್ರೇಶ್ವರೀ ದೇವ್ಯೈ ನಮಃ ॥ ॥ ಮಹಾಮಾತೆ ಶ್ರೀ ಪದ್ಮಾವತೀ ದೇವ್ಯೈ ನಮಃ ॥

ಆತ್ಮೀಯ ಬಂಧುಗಳೇ,

ಭಾರತದ ತೀರ್ಥಕ್ಷೇತ್ರಗಳ ಪರಂಪರೆಯಲ್ಲಿ ‘ಕಾರ್ಕಳ’ ಪುಣ್ಯಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಮೂಡಬಿದಿರೆಯನ್ನೂ ಒಳಗೊಂಡಂತೆ ‘ಜೈನಕಾಶಿ’ ಎಂದೇ ಕರೆಯಲ್ಪಡುವ ಕಾರ್ಕಳ ಕ್ಷೇತ್ರ ಅಸಂಖ್ಯಾತ ಶ್ರದ್ಧಾವಂತರ ಭಕ್ತಿಯ ಕೇಂದ್ರವೆನಿಸಿದೆ. ಹದಿನೆಂಟು ಜಿನಮಂದಿರಗಳಿಂದ ಕಂಗೊಳಿಸುತ್ತಿರುವ ಈ ಕೇಂದ್ರ ಹಿರಿಯಂಗಡಿಯ ಭ। ಶ್ರೀ ನೇಮಿನಾಥ ಸ್ವಾಮಿಯ ಹಿರೇಬಸದಿ, ರಾಷ್ಟ್ರೀಯ ಸ್ಮಾರಕವೆನಿಸಿರುವ ಉನ್ನತ ಮಾನಸ್ತಂಭ, ಮಾತ್ರವಲ್ಲದೆ ಅತ್ಯುನ್ನತವಾದ ಶಿಲಾಬೆಟ್ಟದ ಮೇಲೆ ಜಗತ್ತಿಗೆಲ್ಲ ತ್ಯಾಗದ ಸಂದೇಶವನ್ನು ಸಾರುತ್ತಿರುವ ಭ। ಬಾಹುಬಲಿ ಸ್ವಾಮಿಯ 42 ಅಡಿ ಎತ್ತರದ ಏಕಶಿಲಾ ಬಿಂಬದ ಕಾರಣದಿಂದ ಲೋಕವಿಖ್ಯಾತಿಯನ್ನು ಪಡೆದಿದೆ. ಇದೆಲ್ಲವೂ ಜೈನರಾದ ನಮ್ಮೆಲ್ಲರ ಮಹಾಭಾಗ್ಯವೆಂದೇ ಹೇಳಬೇಕು. ಶ್ರೇಷ್ಠ ಜೈನ ರಾಜವಂಶವಾದ ಭೈರವರಸರ ರಾಜಧಾನಿಯಾಗಿ ಮೆರೆದ ಈ ಪುಣ್ಯಕ್ಷೇತ್ರ, ದೈವೀಶಕ್ತಿಗಳ ಸಾನಿಧ್ಯವನ್ನೂ ಪಡೆದಿರುವ ಪಾವನಕ್ಷೇತ್ರವೆನಿಸಿದೆ. ಒಂದೊಮ್ಮೆ ಸುಂದರ ಅರಮನೆಯನ್ನು ಹೊತ್ತು ಮೆರೆದ ಈ ಪುಣ್ಯಭೂಮಿ ಇಂದು ಗುರುಮಠ, ಸಂಸ್ಕಾರ ನೀಡುವ ಆಶ್ರಮಗಳು ಹಾಗೂ ಜೈನ ವಿದ್ಯಾಸಂಸ್ಥೆಗಳಿಂದ ಮೆರೆಯುತ್ತಿದೆ.

ಇಂತಹ ಪುಣ್ಯಕ್ಷೇತ್ರ ವಿಶ್ವದ ಪ್ರವಾಸೀ ಕೇಂದ್ರಗಳಲ್ಲಿ ಒಂದೆನಿಸಿದ್ದು, ಎರಡು ಚತುರ್ಮುಖ ಬಸದಿಗಳನ್ನು ಹೊಂದಿರುವುದು ಇಲ್ಲಿಯ ವೈಶಿಷ್ಟ್ಯವೆನಿಸಿದೆ. ಎರಡೂ ಅದ್ವಿತೀಯ ಜಿನಾಲಯಗಳೆನಿಸಿದ್ದು, ಸ್ಥಳೀಯ ಮತ್ತು ದರ್ಶನಾರ್ಥಿಗಳ ಆಕರ್ಷಣೆಯ ಕೇಂದ್ರಗಳೆನಿಸಿವೆ. ಅದರಲ್ಲಿಯೂ ಹೆದ್ದಾರಿಯ ಬದಿಯಲ್ಲಿದ್ದು, ವಿಶಾಲವಾದ ಸುಂದರ ಸರೋವರದ ನಡುವೆ ಕಂಗೊಳಿಸುವ ‘ಆನೆಕೆರೆ ಚತುರ್ಮುಖ ಕೆರೆಬಸದಿ’ ನಿರಾಯಾಸವಾಗಿ ಪ್ರತಿಯೊಬ್ಬರ ಕಣ್ಣಿಗೆ ಬೀಳುವ ಮಂದಿರವೆನಿಸಿದೆ. ಜೈನರ ಘನತೆ-ಗೌರವಗಳ ಪ್ರತೀಕದಂತಿದ್ದ ಈ ಆನೆಕೆರೆ ಬಸದಿ ಇತ್ತೀಚಿನ ವರ್ಷಗಳಲ್ಲಿ ಶಿಥಿಲವಾಗಿ ತುಂಬ ಅವಗಣಿತ ಸ್ಥಿತಿಯಲ್ಲಿದ್ದುದು ತಮಗೆಲ್ಲಾ ತಿಳಿದೇ ಇದೆ. ಪ್ರಸ್ತುತ ಈ ಬಸದಿಯನ್ನು ಸರ್ವಾಂಗ ಸುಂದರವಾಗಿ ಜೀರ್ಣೋದ್ಧಾರಗೊಳಿಸುವ ಸಂಕಲ್ಪ ಕಾರ್ಯಗತಗೊಳ್ಳುತ್ತಿದ್ದು, ಕೆಲಸಗಳು ವೇಗವಾಗಿ ನಡೆಯುತ್ತಿರುವುದೂ ತಮಗೆ ತಿಳಿದಿದೆ.

ಕಾರ್ಕಳದ ಹೃದಯಭಾಗದಲ್ಲಿ 26 ಎಕ್ರೆ ವಿಸ್ತೀರ್ಣದಲ್ಲಿ ಶೋಭಿಸುತ್ತಿರುವ ಆನೆಕೆರೆ, ಭೈರವರಸರ ಆನೆಗಳಿಗೆ ನೀರು ಕುಡಿಸಲು ಮತ್ತು ಸ್ನಾನ ಮಾಡಿಸಲು ನಿರ್ಮಾಣಗೊಂಡ ಸುಂದರ ಸರೋವರ. ಅದರ ಮಧ್ಯೆ ಭೈರವರಸರ ವಂಶಸ್ಥ ಪಾಂಡ್ಯನಾಥ ಪಾಂಡ್ಯಪ್ಪೊಡೆಯ ತಾ. 16-5-1545ರಲ್ಲಿ ಪ್ರತಿಷ್ಠಾಪನೆಗೊಳಿಸಿದ ಚತುರ್ಮುಖ ಕೆರೆ ಬಸದಿಯಲ್ಲಿ ಭ। ಶ್ರೀ ಆದಿನಾಥ ಸ್ವಾಮಿ, ಭ। ಶ್ರೀ ಚಂದ್ರನಾಥ ಸ್ವಾಮಿ, ಭ। ಶ್ರೀ ಶಾಂತಿನಾಥ ಸ್ವಾಮಿ, ಭ। ಶ್ರೀ ಮಹಾವೀರ ಸ್ವಾಮಿ ಪರಂಪರಾನುಗತವಾಗಿ ಆರಾಧಿಸಲ್ಪಡುತ್ತಾ ಬಂದಿರುವುದಲ್ಲದೆ ವಿಶೇಷವಾಗಿ ಮೇಗಿನ ನೆಲೆಯಲ್ಲಿ ಭ। ಶ್ರೀ ಪಾರ್ಶ್ವನಾಥ ಸ್ವಾಮಿ ಮತ್ತು ಮಹಾಮಾತೆ ಶ್ರೀ ಪದ್ಮಾವತೀ ದೇವಿ ಪೂರ್ವಾಭಿಮುಖವಾಗಿ ಪ್ರತಿಷ್ಠೆಗೊಂಡು ಪೂಜಿಸಲ್ಪಡುತ್ತಿದ್ದರು. ಈಗಾಗಲೇ ಗುರು-ಹಿರಿಯರ ಉಪಸ್ಥಿತಿಯಲ್ಲಿ ನಡೆಸಿದ ‘ಸ್ಥಳಪ್ರಶ್ನೆ’ಯಲ್ಲಿ ಈ ಕ್ಷೇತ್ರದ ಜೀರ್ಣೋದ್ಧಾರ ಹಾಗೂ ಪುನರ್‌ಪ್ರತಿಷ್ಠೆ ನೆರವೇರಿಸಿದರೆ, ಇಡೀ ಕ್ಷೇತ್ರ ವಿಶೇಷ ಪ್ರಸಿದ್ಧಿಯನ್ನು ಪಡೆಯಲಿದೆಯೆಂದೂ ತಿಳಿದುಬಂದಿರುತ್ತದೆ.

ವಿಶಿಷ್ಟ ವಾಸ್ತುಶೈಲಿಯಿಂದ ಕಂಗೊಳಿಸುವ ರೀತಿಯಲ್ಲಿ ಪುನರ್‌ನಿರ್ಮಾಣಗೊಳ್ಳುತ್ತಿರುವ ಕೆರೆಬಸದಿ ಕ್ಷೇತ್ರ, ಇಡೀ ಜೈನ ಸಮಾಜದ ಗೌರವವನ್ನು ಹೆಚ್ಚಿಸಲಿದೆ ಎಂಬುದು ನಮ್ಮ ಭಾವನೆ. ಅದಕ್ಕೆಂದೇ ಎಲ್ಲರ ಸಹಕಾರದ ನಿರೀಕ್ಷೆಯೊಂದಿಗೆ ಕಾರ್ಯೋನ್ಮುಖರಾಗಿದ್ದೇವೆ. ಈ ಕೆರೆಬಸದಿಯು ಐದು ಶತಮಾನಗಳ ಹಿಂದೆ ರಾಜನ ನೇತೃತ್ವದಲ್ಲಿ, ಪೂಜ್ಯ ದಿಗಂಬರ ಮುನಿ ಮಹಾರಾಜರ ಮಾರ್ಗದರ್ಶನ ಮತ್ತು ಸಾನಿಧ್ಯದಲ್ಲಿ ನೆರವೇರಿತ್ತೆಂದು ತಿಳಿದುಬಂದಿದೆ. ಇಲ್ಲಿ ಪ್ರತಿಯೊಂದು ಪ್ರಮುಖ ಕೆಲಸವನ್ನು ಕೈಗೊಳ್ಳುವಾಗಲೂ ನಮ್ಮ ಭಾಗ್ಯವೆಂಬಂತೆ ಹಲವು ಮಂದಿ ಪೂಜ್ಯ ಮುನಿಶ್ರೀಗಳವರ ಆಗಮನ ಮತ್ತು ಉಪಸ್ಥಿತಿ ನಮಗೆ ವಿಶೇಷ ಉತ್ಸಾಹವನ್ನು ತುಂಬಿದೆ. ಪ್ರಸ್ತುತ ಪುಣ್ಯಭಾಗ್ಯದಿಂದ ಯುಗಳ ಮುನಿಶ್ರೀಗಳಾದ ಪ.ಪೂ. 108 ಮುನಿಶ್ರೀ ಅಮೋಘ ಕೀರ್ತಿ ಮಹಾರಾಜ್ ಮತ್ತು ಪ.ಪೂ. 108 ಮುನಿಶ್ರೀ ಅಮರ ಕೀರ್ತಿ ಮಹಾರಾಜ್ ಮುನಿಶ್ರೀಗಳವರ ವಿಶೇಷ ಕೃಪಾಶೀರ್ವಾದ ಮತ್ತು ವಿಶೇಷ ಮುತುವರ್ಜಿಯಿಂದ ಈ ಬಸದಿ ಸಂಪೂರ್ಣ ಶಿಲಾಮಯಗೊಳ್ಳಲು ಮಾರ್ಗದರ್ಶನ ನಮಗೆ ಲಭಿಸಿವೆ. ಈ ಬಸದಿಯಲ್ಲಿ ಈಗಾಗಲೇ ಸುಂದರವಾದ ಹೊರಗಿನ ಆವರಣಗೋಡೆ ಮತ್ತು ಬಸದಿಯ ಕೆಲಸವನ್ನು ಸಂಪೂರ್ಣ ಶಿಲಾಮಯದೊಂದಿಗೆ ಪುರಾತನ ವಾಸ್ತುಶಿಲ್ಪ ಕೆತ್ತನೆಯೊಂದಿಗೆ ಅತ್ಯಂತ ಸುಂದರವಾಗಿ ಮಾಡಲಾಗುತ್ತಿದೆ.

ಸುಂದರ ಚತುರ್ಮುಖ ಕೆರೆಬಸದಿಯನ್ನು ಸಂಪೂರ್ಣ ಶಿಲಾಮಯವಾಗಿ ನಿರ್ಮಿಸುವ ಕಾರ್ಯ ಭರದಿಂದ ಸಾಗುತ್ತಿದ್ದು ಕಾರ್ಕಳ ಜೈನಮಠಾಧೀಶರಾದ ರಾಜಗುರು ಧ್ಯಾನಯೋಗಿ ಸ್ವಸ್ತಿ ಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ಪಾವನ ಸಾನಿಧ್ಯದಲ್ಲಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಪದ್ಮವಿಭೂಷಣ ರಾಜರ್ಷಿ ಡಾ। ವೀರೇಂದ್ರ ಹೆಗ್ಗಡೆಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ಮತ್ತು ಬಸದಿಯ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್, ಕಾರ್ಯಾಧ್ಯಕ್ಷರು, ಶ್ರೀ ಜೈನಧರ್ಮ ಜೀರ್ಣೋದ್ಧಾರಕ ಸಂಘ ಇವರ ನೇತೃತ್ವದಲ್ಲಿ ಗೌರವ ಸಲಹೆಗಾರರಾಗಿ ಶ್ರೀ ಕೆ. ರತ್ನಾಕರ ರಾಜ್, ಅರಸು ಕಿನ್ಯಕ್ಕ ಬಳ್ಳಾಲ್, ಪಡುಬಿದ್ರೆ ಬೀಡು; ಶ್ರೀ ಕೆ. ಅಭಯಚಂದ್ರ ಜೈನ್, ಮೂಡಬಿದ್ರೆ; ಶ್ರೀ ಎಂ. ಕೆ. ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ, ಶ್ರೀ ಜೈನ ಧರ್ಮ ಜೀರ್ಣೋದ್ಧಾರಕ ಸಂಘ (ರಿ.) ಕಾರ್ಕಳ, ವಾಸ್ತುತಜ್ಞರಾಗಿ ಮೂಡಬಿದ್ರೆ ಸುದರ್ಶನ ಇಂದ್ರರು ಮತ್ತು ಸಮಾಜ ಬಾಂಧವರ ಸರ್ವ ರೀತಿಯ ಸಹಕಾರದೊಂದಿಗೆ ಬಸದಿಯನ್ನು ಸರ್ವಾಂಗ ಸುಂದರವಾಗಿ ಅಭಿವೃದ್ಧಿ ಪಡಿಸುವ ದೃಢ ಸಂಕಲ್ಪದೊಂದಿಗೆ ಜೀರ್ಣೋದ್ಧಾರಕ್ಕೆ ಕಾರ್ಯಪ್ರವೃತ್ತರಾಗಿರುತ್ತೇವೆ.

ಸುಮಾರು 2.72 ಕೋಟಿ ವೆಚ್ಚದಲ್ಲಿ, ನಾಡಿನಾದ್ಯಂತದ ಶ್ರಾವಕ ಬಂಧುಗಳ ಮತ್ತು ಕೊಡುಗೈ ದಾನಿಗಳ ಸಹಕಾರದೊಂದಿಗೆ ಬಸದಿ ಪುನರ್ ನಿರ್ಮಾಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಕಾರ್ಕಳ ಶಾಸಕರು ಮಾನ್ಯ ಇಂಧನ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಸಚಿವರಾದ ಸನ್ಮಾನ್ಯ ಶ್ರೀ ವಿ. ಸುನಿಲ್ ಕುಮಾರ್‌ರವರ ಮುತುವರ್ಜಿಯಿಂದ ಆನೆಕೆರೆ ಬಸದಿಯ ಸುತ್ತಮುತ್ತಲಿನ ಕಾಮಗಾರಿಯು ಪ್ರಾರಂಭ ವಾಗುತ್ತಿರುವುದು ಯೋಗಾಯೋಗ.

ಕಾರ್ಕಳ ಜೀವಜಲದ ಅಭಿವೃದ್ಧಿ, ಕೆರೆಯ ಮಧ್ಯದ ಚತುರ್ಮುಖ ಬಸದಿಯ ಜೀರ್ಣೋದ್ಧಾರದೊಂದಿಗೆ ಐತಿಹಾಸಿಕ ಮಹತ್ವವನ್ನು ಪಡೆದಿರುವ ಈ ಒಂದು ಪುಣ್ಯಕಾರ್ಯದಲ್ಲಿ ನಾಡಿನಾದ್ಯಂತ ಸದ್ಧರ್ಮ ಬಂಧುಗಳು ಮತ್ತು ಕೊಡುಗೈ ದಾನಿಗಳು ತುಂಬು ಹೃದಯದ ಸಹಕಾರವನ್ನು ನೀಡಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

| | | | |
|---|---|---|---|
| 1) | ಅದಿಸ್ಥಾನ 200 Running Feet - 1 Running Feet - 10,000/- | ... | 20,00,000/- |
| 2) | ಗೋಡೆ ಕಲ್ಲು 2500 Sq Ft. 1 Sq Ft. - 1200/- | ... | 30,00,000/- |
| 3) | ಕಂಬಗಳು 1) ಯಾಳಿ ಕಂಬ 8; 1 ಕಂಬಕ್ಕೆ - 2,00,000/- | ... | 16,00,000/- |
| | 2) ಒಳ ಕಂಬಗಳು 8; 1 ಕಂಬಕ್ಕೆ - 1,25,000/- | ... | 10,00,000/- |
| | 3) ಹೊರಗಿನ ಕಂಬಗಳು 4; 1 ಕಂಬಕ್ಕೆ - 1,50,000/- | ... | 6,00,000/- |
| 4) | ಬಿತ್ತಿ ಕಂಬಗಳು - 30 ಕಂಬಗಳು; 1 ಕಂಬಕ್ಕೆ - 40,000/- | ... | 12,00,000/- |
| 5) | ಘನದ್ವಾರ - 6 ಸಂಖ್ಯೆ; 1ಕ್ಕೆ - 50,000/- | ... | 3,00,000/- |
| 6) | ಅಷ್ಟಪಟ್ಟಿಯ ಪಾಣಿ ಪೀಠ (ಈಗಾಗಲೇ ಯುಗಳ ಮುನಿಮಹಾರಾಜರುಗಳು ವಹಿಸಿಕೊಂಡಿದ್ದಾರೆ) | | 5,00,000/- |
| 7) | ದಾರಂದ - ಹೊರಗಿನ - 4; 1 ದಾರಂದ - 60,000/- | ... | 2,40,000/- |
| | ಒಳಗಿನ - 4; 1 ದಾರಂದ - 40,000/- | ... | 1,60,000/- |
| | ಮೇಲಿನ - 1 ದಾರಂದ - 40,000/- | ... | 40,000/- |
| 8) | ಆನೆಕಲ್ಲು - 4 steps; 1 step setಗೆ - 75,000/- | ... | 3,00,000/- |
| 9) | Roof - 7,000 Sq Ft. - 1 Sq Ft. x 1000/- | ... | 70,00,000/- |
| 10) | ಮುಚ್ಚಿಗೆಗೆ | ... | 1,00,000/- |
| 11) | ಸಿವಿಲ್ ಕಾಮಗಾರಿ | ... | 35,00,000/- |
| 12) | ನಾಗನ / ಕ್ಷೇತ್ರಪಾಲ ಕಟ್ಟೆ | ... | 6,00,000/- |
| 13) | ಗೋಪುರಕ್ಕೆ | ... | 30,00,000/- |
| 14) | ದ್ವಾರಪಾಲಕ 8 no; 1 no. - 75,000/- | ... | 6,00,000/- |
| 15) | ಮರ ಮತ್ತು ಕೆತ್ತನೆ ಕೆಲಸ | ... | 15,00,000/- |
| | | | 2,72,40,000/- |

ಈ ಮೇಲಿನ ಶಾಶ್ವತ ಕಾಮಗಾರಿಗಳ ಖರ್ಚನ್ನು ದಾನಿಗಳು ನೀಡಿದರೆ, ಅವರ ಹೆಸರನ್ನು ಶಿಲಾಫಲಕದಲ್ಲಿ ಮತ್ತು ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸೂಕ್ತ ರೀತಿಯಲ್ಲಿ ಗೌರವಿಸಲಾಗುವುದು.

**ದಾನಿಗಳನ್ನು ಸೂಕ್ತ ರೀತಿಯಲ್ಲಿ ಗೌರವಿಸಬೇಕೆಂಬ ಸಂಕಲ್ಪ ನಮ್ಮದು**

- ರೂ. 5,000ಕ್ಕಿಂತ ಹೆಚ್ಚು ದೇಣಿಗೆ ನೀಡಿದವರ ಹೆಸರನ್ನು ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.
- ರೂ. 25,000ಕ್ಕಿಂತ ಹೆಚ್ಚು ದೇಣಿಗೆ ನೀಡಿದವರ ಹೆಸರನ್ನು ಸ್ಮರಣ ಸಂಚಿಕೆಯೊಂದಿಗೆ ಶಿಲಾಫಲಕದಲ್ಲಿ ಪ್ರಕಟಿಸಲಾಗುವುದು.
- ರೂ. 50,000ಕ್ಕಿಂತ ಹೆಚ್ಚು ದೇಣಿಗೆ ನೀಡಿದವರ ಹೆಸರನ್ನು ಶಿಲಾಫಲಕದಲ್ಲಿ ಪ್ರಕಟಿಸಲಾಗುವುದಲ್ಲದೆ ಸ್ಮರಣ ಸಂಚಿಕೆಯಲ್ಲಿ ½ ಪುಟದಲ್ಲಿ ಭಾವಚಿತ್ರ ಪ್ರಕಟಿಸಲಾಗುವುದು.
- ರೂ. 1,00,000ಕ್ಕಿಂತ ಹೆಚ್ಚು ದೇಣಿಗೆ ನೀಡಿದವರ ಹೆಸರನ್ನು ಶಿಲಾಫಲಕದಲ್ಲಿ ಪ್ರಕಟಿಸಿ, ಸ್ಮರಣ ಸಂಚಿಕೆಯಲ್ಲಿ 1 ಪುಟದಲ್ಲಿ ಭಾವಚಿತ್ರ ಪ್ರಕಟಿಸಿ, ಧಾಮಸಂಪ್ರೋಕ್ಷಣಾ ವೇದಿಕೆಯಲ್ಲಿ ಗೌರವಿಸಲಾಗುವುದು.

ಈ ಪುಣ್ಯಕಾರ್ಯದಲ್ಲಿ ಕೈಜೋಡಿಸಲು ಅಪೇಕ್ಷಿಸುವವರು, **ಕೆನರಾ ಬ್ಯಾಂಕ್ ಕಾರ್ಕಳ ಶಾಖೆಯ A/c No. 110026983256, IFSC : CNRB0000609**ಕ್ಕೆ ಸಂದಾಯವಾಗುವಂತೆ ಚೆಕ್/ಡಿ.ಡಿ. ಮೂಲಕ ನೀಡಬಹುದು ಅಥವಾ ನಗದುರೂಪದಲ್ಲಿ ಪಾವತಿಸಬಹುದು.

ANEKERECHATURMUKHA KEREBASADI JEERNODHAR

307667165983256@cnrb

ನಿಮ್ಮ ಪೂರ್ಣ ಸಹಾಯ, ಸಹಕಾರವನ್ನು ನಿರೀಕ್ಷಿಸುವ,

ಅಧ್ಯಕ್ಷರು

ಡಾ. ಎಂ.ಎನ್. ರಾಜೇಂದ್ರ ಕುಮಾರ್

ಕಾರ್ಕಳ

ಕಾರ್ಯಾಧ್ಯಕ್ಷರು

ಶ್ರೀ ಮಹಾವೀರ ಹೆಗ್ಡೆ, ಮುಡಾರು

ಸಂಚಾಲಕರು

ಶ್ರೀ ನೇಮಿರಾಜ ಆರಿಗ, ಕಾರ್ಕಳ

ಪ್ರಧಾನ ಕಾರ್ಯದರ್ಶಿ

ಶ್ರೀ ಭರತ್‌ಕುಮಾರ್ ಜೈನ್, ಇರ್ವತ್ತೂರು

ಕೋಶಾಧಿಕಾರಿ

ಶ್ರೀ ಶೀತಲ್ ಜೈನ್, ಶಿರ್ಲಾಲು

ಜೊತೆ ಕಾರ್ಯದರ್ಶಿ

ಶ್ರೀ ಸೂರಜ್ ಜೈನ್, ನ್ಯಾಯವಾದಿ

ಶ್ರೀ ಪ್ರಕಾಶ್ ಬಲಿಪ, ಮಿಯ್ಯಾರು

ಶ್ರೀ ಸಂಪತ್ ಜೈನ್, ಕಾರ್ಕಳ

ಗೌರವ ಸಲಹೆಗಾರರು

ಶ್ರೀ ಕೆ. ರತ್ನಾಕರ ರಾಜ್;

ಅರಸು ಕಿನ್ನಿಕ್ಕ ಬಳ್ಳಾಲ್, ಪಡುಬಿದ್ರೆ ಬೀಡು

ಶ್ರೀ ಕೆ. ಅಭಯಚಂದ್ರ ಜೈನ್, ಮೂಡಬಿದ್ರೆ

ಶ್ರೀ ಎಂ. ಕೆ. ವಿಜಯಕುಮಾರ್, ಕಾರ್ಕಳ

ಮೊಕ್ತೇಸರರು

ಶ್ರೀ ಉದಯ ಕಡಂಬ, ನೆಲ್ಲಿಕಾರು

ಉಪಾಧ್ಯಕ್ಷರು

ಶ್ರೀ ಕೆ. ಗುಣಪಾಲ ಕಡಂಬ, ಶಿರ್ಲಾಲು

ಶ್ರೀ ವೈ. ಸೂರಜ್‌ಕುಮಾರ್, ಪಟ್ನಶೆಟ್ಟಿ, ದಾನಶಾಲೆ

ಶ್ರೀ ಪುಷ್ಪರಾಜ್ ಜೈನ್, ಮಂಗಳೂರು

ಶ್ರೀ ಎಂ.ಕೆ. ಸುವೃತ್ ಕುಮಾರ್, ಕಾರ್ಕಳ

ಶ್ರೀ ವೃಷಭರಾಜ್ ಕಡಂಬ, ಕುಕ್ಕುಂದೂರು

ಶ್ರೀ ಶ್ರೀವರ್ಮ ಜೈನ್, ಕಾರ್ಕಳ

ಶ್ರೀ ಮಹೇಂದ್ರವರ್ಮ ಜೈನ್, ಮೂಡಬಿದಿರೆ

ಹಾಗೂ ಸಮಿತಿಯ ಎಲ್ಲಾ ಪದಾಧಿಕಾರಿಗಳು